## ಮುಖ್ಯ ಸೂಚನೆ :

(i) ಕ.ಪ.ಪ್ರಾ (ಸಿಇಟಿ ಸೆಲ್) ಮೂಲಕ ಈ ಹಿಂದಿನ ವರ್ಷಗಳಲ್ಲಿ ಯಾವುದಾದರೂ ವಿಭಾಗದಲ್ಲಿ ಸೀಟನ್ನು ಆಯ್ಕೆ ಮಾಡಿಕೊಂಡಿರುವ ಅಭ್ಯರ್ಥಿಗಳು ಈ ಬಾರಿ ಅದೇ ವಿಭಾಗದಲ್ಲಿ ಸೀಟನ್ನು ಆಯ್ಕೆಮಾಡಿಕೊಳ್ಳಲು ಸಾಮಾನ್ಯ ಪ್ರವೇಶ ಪರೀಕ್ಷೆ–2013ಕ್ಕೆ ಹಾಜರಾಗಲು ಅರ್ಹರಿರುವುದಿಲ್ಲ. ಅಂತಹ ಅಭ್ಯರ್ಥಿಗಳು ಈ ವರ್ಷ ಬೇರೆ ವಿಭಾಗಗಳಲ್ಲಿ ಸೀಟನ್ನು ಆಯ್ಕೆ ಮಾಡಿಕೊಂಡಲ್ಲಿ ಅವರು ಹಿಂದಿನ ವರ್ಷಗಳಲ್ಲಿ ಆಯ್ಕೆಮಾಡಿಕೊಂಡಿದ್ದ ಸೀಟನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತದೆ.

(ii) ಹೊರನಾಡು ಮತ್ತು ಗಡಿನಾಡು ಅಭ್ಯರ್ಥಿಗಳಿಗೆ ಪ್ರಾಧಿಕಾರವು 50 ಅಂಕಗಳಿಗೆ ನಡೆಸುವ ಕನ್ನಡ ಭಾಷಾ ಪರೀಕ್ಷೆಯಲ್ಲಿ ಕನಿಷ್ಟ 12 ಅಂಕಗಳನ್ನು ಪಡೆಯುವ ಅಭ್ಯರ್ಥಿಗಳನ್ನು ಮಾತ್ರ ಸಿಇಟಿ–2013ರ ರ‍್ಯಾಂಕ್ ನೀಡಲು ಮತ್ತು ಸೀಟು ಆಯ್ಕೆಗೆ ಪರಿಗಣಿಸಲಾಗುವುದು. (4ನೇ ತರಗತಿಗೆ ಬೋಧಿಸಲು ನಿಗದಿ ಪಡಿಸಿರುವ ಪಠ್ಯಕ್ರಮವನ್ನು ಕನ್ನಡ ಭಾಷಾ ಪರೀಕ್ಷೆಗೆ ಅಳವಡಿಸಿಕೊಳ್ಳಲಾಗುವುದು).

(iii) "ಕೃಷಿಕ ಕುಟುಂಬ ಅಭ್ಯರ್ಥಿಗಳ ಕೋಟದ" ಅಡಿ ಕೃಷಿ ವಿಜ್ಞಾನ / ತೋಟಗಾರಿಕೆ ಕೋರ್ಸುಗಳ ಪ್ರವೇಶಕ್ಕೆ ಮೆರಿಟ್ ಪಟ್ಟಿಯನ್ನು ಅಭ್ಯರ್ಥಿಯ ಅರ್ಹತಾ ಪರೀಕ್ಷೆ ಮತ್ತು ಸಿಇಟಿ ಪರೀಕ್ಷೆಯ ಐಚ್ಛಿಕ ವಿಷಯಗಳಲ್ಲಿ ತಲಾ ಶೇ.25% ರಷ್ಟು ಅಂಕಗಳನ್ನು ಮತ್ತು ಪ್ರಾಯೋಗಿಕ ಪರೀಕ್ಷೆಯ ಶೇ.50% ರಷ್ಟು ಅಂಕಗಳನ್ನು ಗಣನೆಗೆ ತೆಗೆದುಕೊಂಡು ರ‍್ಯಾಂಕ್ ನಿಗದಿಪಡಿಸಲಾಗುವುದು. ಬಿ.ವಿ.ಎಸ್.ಸಿ ಅಂಡ್ ಎಹೆಚ್ ಕೋರ್ಸುಗಳಿಗೆ ಅಭ್ಯರ್ಥಿಯು ಸಿಇಟಿ ಪರೀಕ್ಷೆಯ ಪಿಸಿಬಿ ವಿಷಯಗಳಲ್ಲಿ ಮತ್ತು ಪ್ರಾಯೋಗಿಕ ಪರೀಕ್ಷೆಯಲ್ಲಿ ಪಡೆಯುವ ಅಂಕಗಳನ್ನು ಸಮಾನವಾಗಿ ಪರಿಗಣಿಸಿ ರ‍್ಯಾಂಕ್ ಪಟ್ಟಿ ನಿರ್ಧರಿಸಲಾಗುವುದು.

**3. ಬ್ರೋಶರ್ ಮತ್ತು ಅರ್ಜಿ ನಮೂನೆ ವಿತರಣೆ :**

**ಕರ್ನಾಟಕದಲ್ಲಿನ ವಿದ್ಯಾರ್ಥಿಗಳು :** ಕರ್ನಾಟಕ ರಾಜ್ಯದಲ್ಲಿರುವ ಶಾಲೆ ಮತ್ತು ಕಾಲೇಜುಗಳಲ್ಲಿ 12ನೇ ತರಗತಿ / ದ್ವಿತೀಯ ಪಿಯುಸಿ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಅಭ್ಯರ್ಥಿಗಳಿಗೆ ದಿನಾಂಕ 08–03–2013ರಂದು ಅಥವಾ ಆನಂತರ ಬ್ರೋಶರ್ ಮತ್ತು ಅರ್ಜಿ ನಮೂನೆಗಳನ್ನು ವಿತರಿಸಲಾಗುವುದು. ಅಭ್ಯರ್ಥಿಗಳು ರೂ. 650/– ಅನ್ನು (ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1ಕ್ಕೆ ಸೇರಿರುವ ಅಭ್ಯರ್ಥಿಗಳು ರೂ. 500/–) ನಗದು ಮೂಲಕ ಪಾವತಿಸಿ ಪಡೆಯಬಹುದು ಅಥವಾ ಪ್ರಾಧಿಕಾರದ ಮಲ್ಲೇಶ್ವರಂ ಶಾಖೆ, ಬೆಂಗಳೂರು ಇಲ್ಲಿನ ಇಂಡಿಯನ್ ಬ್ಯಾಂಕ್‌ನ ಲೆಕ್ಕ ಖಾತೆ ಸಂಖ್ಯೆ 878333780 ಗೆ ನೇರವಾಗಿ ಸಂದಾಯವಾಗುವಂತೆ NEFT / IFSC Code IDIB000M010 ಮೂಲಕ ಪಾವತಿಸಿ ಯುಟಿಆರ್ ನಂಬರ್ ಅನ್ನು ಪ್ರಾಂಶುಪಾಲರಿಗೆ ನೀಡಿ ಬ್ರೋಶರ್ ಅನ್ನು ಪಡೆಯಬಹುದಾಗಿದೆ. ಅಭ್ಯರ್ಥಿಗಳು ಮತ್ತು ಕಾಲೇಜಿನವರು NEFT ಮೂಲಕ ಹಣವನ್ನು ಸಂದಾಯ ಮಾಡಿದ ಬಗ್ಗೆ ದಾಖಲೆಗೆ ಯುಟಿಆರ್ ನಂಬರ್ ಅನ್ನು ತಮ್ಮ ಬಳಿಯಲ್ಲಿ ಜೋಪಾನವಾಗಿ ಇಟ್ಟುಕೊಳ್ಳತಕ್ಕದ್ದು. ಅಭ್ಯರ್ಥಿಗಳು ಭರ್ತಿ ಮಾಡಿದ ಅರ್ಜಿಗಳನ್ನು ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರುಗಳು ಸ್ವೀಕರಿಸಿ ಕಾಲೇಜಿನ ಹಿಂಬರಹದೊಂದಿಗೆ ಅವುಗಳನ್ನು ದಿನಾಂಕ 05–04–2013ರೊಳಗೆ ಆಡಳಿತಾಧಿಕಾರಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಮಲ್ಲೇಶ್ವರಂ, 18ನೇ ಅಡ್ಡ ರಸ್ತೆ, ಬೆಂಗಳೂರು – 560 012 ಇವರಿಗೆ ಸಲ್ಲಿಸತಕ್ಕದ್ದು.

**ಕರ್ನಾಟಕವನ್ನು ಹೊರತುಪಡಿಸಿ** ಇತರೆ ಯಾವುದೇ ಹೊರ ರಾಜ್ಯಗಳಲ್ಲಿ 12ನೇ ತರಗತಿ ಅಥವಾ ತತ್ಸಮಾನ ತರಗತಿಯಲ್ಲಿ ವ್ಯಾಸಂಗ ಮಾಡಿದ ಅಥವಾ ಪರೀಕ್ಷೆಗೆ ಕುಳಿತ ಕರ್ನಾಟಕದ ಅಭ್ಯರ್ಥಿಗಳು (ಹೊರನಾಡು / ಗಡಿನಾಡು ಕನ್ನಡಿಗ ಮತ್ತು ಜಮ್ಮು ಮತ್ತು ಕಾಶ್ಮೀರಿ ವಲಸೆಗಾರರ ಅಭ್ಯರ್ಥಿಗಳು ಮತ್ತು ಇತರೆ ಕರ್ನಾಟಕದ ಅಭ್ಯರ್ಥಿಗಳು ಸೇರಿದಂತೆ ಅಂದರೆ ಕರ್ನಾಟಕದ ಸೀಟುಗಳನ್ನು ಪಡೆಯಲು ಅರ್ಹತೆ ಹೊಂದಿರುವ ಅಭ್ಯರ್ಥಿಗಳು) ಬ್ರೋಶರ್ ಮತ್ತು ಅರ್ಜಿ ನಮೂನೆಗಳನ್ನು, ರೂ. 750/– ಅನ್ನು ಪ್ರಾಧಿಕಾರದ ಮಲ್ಲೇಶ್ವರಂ ಶಾಖೆ, ಬೆಂಗಳೂರು ಇಲ್ಲಿನ ಇಂಡಿಯನ್ ಬ್ಯಾಂಕ್‌ನ ಲೆಕ್ಕ ಖಾತೆ ಸಂಖ್ಯೆ 878333780 ಗೆ ನೇರವಾಗಿ ಸಂದಾಯವಾಗುವಂತೆ NEFT / IFSC Code IDIB000M010 ಮೂಲಕ ಪಾವತಿಸಿ, ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ಪ್ರಚುರ ಪಡಿಸಿರುವ ನಿಗದಿತ ನಮೂನೆಯಲ್ಲಿ ಮಾಹಿತಿಯನ್ನು ಪ್ರಾಧಿಕಾರದ ಇ–ಮೇಲ್ keauthority-ka@nic.in ಗೆ ಕಳುಹಿಸಿ ಸಿಇಟಿ–2013ರ ಬ್ರೋಚರ್ ಮತ್ತು ಅರ್ಜಿ ನಮೂನೆಯನ್ನು ಪಡೆಯಬಹುದು. ಇಂಕ್‌ನಲ್ಲಿ ಸಹಿ ಹಾಕಿದ ಮತ್ತು ಅಭ್ಯರ್ಥಿಯ ಭಾವಚಿತ್ರವನ್ನು ಅಂಟಿಸಿದ ಮೂಲ ಅರ್ಜಿಯನ್ನು ದಿನಾಂಕ 05–04–2013ರೊಳಗೆ ಆಡಳಿತಾಧಿಕಾರಿ, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಮಲ್ಲೇಶ್ವರಂ, 18ನೇ ಅಡ್ಡ ರಸ್ತೆ, ಬೆಂಗಳೂರು – 560 012 ಇವರಿಗೆ ಸಲ್ಲಿಸತಕ್ಕದ್ದು ಮತ್ತು ಇದರ ಪ್ರತಿಯನ್ನು ಪ್ರಾಧಿಕಾರದ ಇ–ಮೇಲ್ keauthority-ka@nic.in ಗೆ ಕಳುಹಿಸಬೇಕು.

**ಸೂಚನೆ:** ನಿಗದಿತ ಶುಲ್ಕವನ್ನು ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು ಇವರ ಹೆಸರಿಗೆ ಡಿಡಿಯನ್ನು ಪಡೆದು ಅಥವಾ ಮೇಲೆ ತಿಳಿಸಿದ ಪ್ರಾಧಿಕಾರದ ಬ್ಯಾಂಕ್ ಖಾತೆಗೆ ನೇರವಾಗಿ ಸಂದಾಯ ಮಾಡಿ ಬ್ರೋಶರ್ ಮತ್ತು ಅರ್ಜಿ ನಮೂನೆಗಳನ್ನು ಪಡೆಯಬಹುದು. ಆದಾಗ್ಯೂ ಪ್ರಾಧಿಕಾರದ ಲೆಕ್ಕಕ್ಕೆ ಹಣ ಸಂದಾಯವಾದ ವಿವರಗಳನ್ನು ಖಾತರಿ ಪಡೆಸಿಕೊಂಡ ನಂತರವೇ ಆಡಳಿತಾಧಿಕಾರಿಗಳು ಬ್ರೋಶರ್‌ಗಳನ್ನು ರವಾನಿಸುವರು.

**2013ನೇ ಸಾಲಿನ ಕರ್ನಾಟಕ ರಾಜ್ಯದಲ್ಲಿನ ವೃತ್ತಿ ಶಿಕ್ಷಣ ಕೋರ್ಸುಗಳ ಪ್ರವೇಶಕ್ಕೆ ಅರ್ಜಿ ಸಲ್ಲಿಸುವ ಮೊದಲು ಪ್ರಾಧಿಕಾರದ ವೆಬ್‌ಸೈಟ್ http://kea.kar.nic.in ನಲ್ಲಿ ನೀಡಲಾಗಿರುವ ಅರ್ಹತೆಯ ಪರಿಚ್ಛೇಧಗಳನ್ನು (Eligibility Clauses) ಓದಿಕೊಂಡು ಅಭ್ಯರ್ಥಿಯ ಅರ್ಹತೆಯ ಬಗ್ಗೆ ಖಾತ್ರಿ ಪಡಿಸಿಕೊಂಡ ನಂತರ ಮಾತ್ರ ಅರ್ಜಿ ಸಲ್ಲಿಸುವುದು. ಯಾವುದೇ ಕಾರಣಕ್ಕೂ ಒಮ್ಮೆ ಪಾವತಿಸಿದ ಶುಲ್ಕವನ್ನು ವಾಪಸ್ಸು ಮಾಡಲಾಗುವುದಿಲ್ಲ. ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ 05–04–2013.**

### ಆನ್‌ಲೈನ್ ಸೀಟು ಹಂಚಿಕೆ ಬಗ್ಗೆ ಟಿಪ್ಪಣಿ

4. ವೈದ್ಯಕೀಯ / ದಂತವೈದ್ಯಕೀಯ / ಆಯುರ್ವೇದ / ಹೋಮಿಯೋಪತಿ / ಯುನಾನಿ / ನ್ಯಾಚುರೋಪತಿ ಮತ್ತು ಯೋಗ / ಇಂಜಿನಿಯರಿಂಗ್ / ಟೆಕ್ನಾಲಜಿ / ಆರ್ಕಿಟೆಕ್ಚರ್ ಕೋರ್ಸುಗಳಿಗೆ ಅರ್ಹ ಅಭ್ಯರ್ಥಿಗಳು ದಾಖಲಿಸುವ ಇಚ್ಛೆ / ಅಯ್ಕೆಯನ್ನು ಪಡೆದು ಸೀಟು ಹಂಚಿಕೆಯನ್ನು ಸಿಇಟಿ–2013ರ ಮೆರಿಟ್ ಆಧಾರದ ಮೇಲೆ ಮಾಡಲಾಗುವುದು.

5. ಫಲಿತಾಂಶ ಪ್ರಕಟಣೆಯ ನಂತರ ಅಭ್ಯರ್ಥಿಗಳ ದಾಖಲೆಗಳನ್ನು ರಾಜ್ಯದಾದ್ಯಂತ ಸ್ಥಾಪಿಸಲಾಗುವ ಸುಮಾರು 13 ಸಹಾಯಕ ಕೇಂದ್ರಗಳಲ್ಲಿ ಪರಿಶೀಲಿಸಲಾಗುವುದು. ದಾಖಲೆಗಳ ಪರಿಶೀಲನೆ ಹಾಗೂ ಪರಿಶೀಲನಾ ಪತ್ರ ನೀಡಿದ ನಂತರ ಅಭ್ಯರ್ಥಿಗಳಿಗೆ ಅವರ ಸೀಟು ಆಯ್ಕೆ ಇಚ್ಛೆಯನ್ನು ಕಂಪ್ಯೂಟರ್‌ನಲ್ಲಿ ದಾಖಲಿಸಲು ಅವಕಾಶ ಕಲ್ಪಿಸಲಾಗುವುದು. ಅಭ್ಯರ್ಥಿಗಳು ಅವರ ಇಚ್ಛಾನುಸಾರ ಎಷ್ಟು ಬೇಕಾದರೂ ಆಯ್ಕೆಯನ್ನು / ಕಾಲೇಜು / ಕೋರ್ಸನ್ನು ಅವರಾಗಿ ಮಾಡಿಕೊಳ್ಳಬಹುದಾದ ವಿಧಾನದ ಮೂಲಕ ದಾಖಲಿಸಬಹುದು. ಅಭ್ಯರ್ಥಿಗಳು ತಾವು ದಾಖಲಿಸುವ ಆಯ್ಕೆಯನ್ನು ಪ್ರಿಂಟ್ ಮಾಡಿಕೊಳ್ಳಬಹುದು. ಅಭ್ಯರ್ಥಿಗಳಿಗೆ ಪ್ರತ್ಯೇಕವಾಗಿ ಲಾಗಿನ್ ಮತ್ತು ಪಾಸ್‌ವರ್ಡ್‌ಗಳನ್ನು ನೀಡಲಾಗುವುದು ಮತ್ತು ಅವರುಗಳು ಅಗತ್ಯಕ್ಕೆ ತಕ್ಕಂತೆ ಬದಲಾವಣೆ ಮಾಡಿಕೊಳ್ಳಬಹುದು. ಸಹಾಯಕ ಕೇಂದ್ರಗಳ ವಿವರಗಳನ್ನು ಸಿಇಟಿ – 2013 ರ ಬ್ರೋಶರ್‌ನಲ್ಲಿ ಹಾಗೂ ಪ್ರಾಧಿಕಾರದ ವೆಬ್‌ಸೈಟ್ http://kea.kar.nic.inನಲ್ಲಿ ನೀಡಲಾಗುವುದು.

6. ಸರ್ಕಾರವು ನೀಡುವ ಸೀಟ್ ಮ್ಯಾಟ್ರಿಕ್ಸ್ ನಂತೆ ಆಯಾ ಕಾಲೇಜುಗಳಲ್ಲಿ ಲಭ್ಯವಿರುವ ಸೀಟುಗಳನ್ನು ಅಭ್ಯರ್ಥಿಗಳ ಸಿಇಟಿ ರ‍್ಯಾಂಕ್ ಹಾಗೂ ಇಚ್ಛೆ / ಆಯ್ಕೆ ಅನುಗುಣವಾಗಿ ಕಾಲೇಜು / ಕೋರ್ಸನ್ನು ಕಂಪ್ಯೂಟರ್ ಹಂಚಿಕೆ ಮಾಡುತ್ತದೆ. ಈ ಬಗ್ಗೆ ಹೆಚ್ಚಿನ ವಿವರಗಳನ್ನು ಸಿಇಟಿ – 2013 ರ ಬ್ರೋಶರ್‌ನಲ್ಲಿ ನೋಡಬಹುದು ಹಾಗೂ ಪ್ರಾಧಿಕಾರದ ವೆಬ್‌ಸೈಟ್http://kea.kar.nic.inನಲ್ಲಿ ನೀಡಲಾಗುವುದು.

7. ಹೊರನಾಡು, ಗಡಿನಾಡು, ಜಮ್ಮು ಮತ್ತು ಕಾಶ್ಮೀರಿ ವಲಸಿಗರು ಹಾಗೂ ಎಲ್ಲಾ ವಿಶೇಷ ಪ್ರವರ್ಗಗಳು ಅಂದರೆ ಎನ್.ಸಿ.ಸಿ., ಕ್ರೀಡೆ, ವಿಕಲಚೇತನರು, ಆಂಗ್ಲೋ ಇಂಡಿಯನ್, ಸೈನಿಕರು, ಮಾಜಿಸೈನಿಕರು, ಸಿಎಪಿಎಫ್ ಮತ್ತು ಸ್ಕೌಟ್ಸ್ ಅಂಡ್ ಗೈಡ್ಸ್ ಅಭ್ಯರ್ಥಿಗಳ ದಾಖಲೆಗಳ ಪರಿಶೀಲನೆಯನ್ನು ಪ್ರಾಧಿಕಾರದ ಬೆಂಗಳೂರು ಕಚೇರಿಯಲ್ಲಿ ಮಾತ್ರ ನಡೆಸಲಾಗುವುದು.

## ಸಾಮಾನ್ಯ ಪ್ರವೇಶ ಪರೀಕ್ಷೆ – 2013ರ ವೇಳಾಪಟ್ಟಿ

| ದಿನಾಂಕ | ದಿನ | ಸಮಯ | ವಿಷಯ | ಅಂಕಗಳು |
|---|---|---|---|---|
| 01–05–2013 | ಬುಧವಾರ | ಬೆಳಿಗ್ಗೆ 10.30 ರಿಂದ 11.50ರ ವರೆಗೆ | ಜೀವಶಾಸ್ತ್ರ | 60 |
| | | ಮಧ್ಯಾಹ್ನ 02.30 ರಿಂದ 03.50ರ ವರೆಗೆ | ಗಣಿತಶಾಸ್ತ್ರ | 60 |
| 02–05–2013 | ಗುರುವಾರ | ಬೆಳಿಗ್ಗೆ 10.30 ರಿಂದ 11.50ರ ವರೆಗೆ | ಭೌತಶಾಸ್ತ್ರ | 60 |
| | | ಮಧ್ಯಾಹ್ನ 02.30 ರಿಂದ 03.50ರ ವರೆಗೆ | ರಸಾಯನಶಾಸ್ತ್ರ | 60 |
| 10–05–2013 | ಶುಕ್ರವಾರ | ಬೆಳಿಗ್ಗೆ 09.00 ನಂತರ | ಕೃಷಿಕ ಕುಟುಂಬ ಕೋಟದ ಅಡಿ ಸೀಟು ಆಯ್ಕೆ ಬಯಸುವ ಅಭ್ಯರ್ಥಿಗಳಿಗೆ "ಕೃಷಿಗೆ ಸಂಬಂಧಿಸಿದಂತೆ ಮಾದರಿಗಳನ್ನು ಗುರುತಿಸಲು" ಪ್ರಾಯೋಗಿಕ ಪರೀಕ್ಷೆ* | 200 |

*ಕೃಷಿಕ ಕುಟುಂಬ ಅಭ್ಯರ್ಥಿಗಳ ಕೋಟದ ಅಡಿಯಲ್ಲಿ ಸೀಟುಗಳನ್ನು ಅರ್ಹತೆ ಪಡೆಯಲು ಪ್ರಾಯೋಗಿಕ ಪರೀಕ್ಷೆಯಲ್ಲಿ ಕನಿಷ್ಟ ಶೇ. 50% ರಷ್ಟು ಅಂಕಗಳನ್ನು ಪಡೆಯಬೇಕು. ಮುಂದುವರಿದು ಈ ಕೃಷಿಕ ಕುಟುಂಬ ಅಭ್ಯರ್ಥಿಗಳ ಕೋಟದ ಸೀಟುಗಳ ಮೀಸಲಾತಿಯು ಕೇವಲ ಮೇಲೆ ವಿವರಸಿರುವ ಕಂಡಿಕೆ 2 (5,6,7 ಮತ್ತು 8) ರಲ್ಲಿಯ ಕೋರ್ಸುಗಳಿಗೆ ಮಾತ್ರ ಅನ್ವಯಿಸುತ್ತದೆ.

## ಕನ್ನಡ ಭಾಷಾ ಪರೀಕ್ಷೆ (ಬೆಂಗಳೂರು ಕೇಂದ್ರದಲ್ಲಿ ಮಾತ್ರ)

| | | | | |
|---|---|---|---|---|
| 03–05–2013 | ಶುಕ್ರವಾರ | ಬೆಳಿಗ್ಗೆ 11.30 ರಿಂದ 12.30ರ ವರೆಗೆ | ಹೊರನಾಡು ಹಾಗೂ ಗಡಿನಾಡು ಕನ್ನಡಿಗ ಅಭ್ಯರ್ಥಿಗಳಿಗೆ | 50 |

**ಚಕ್ರವರ್ತಿ ಮೋಹನ್,** ಭಾಆಸೇ
**ಕಾರ್ಯನಿರ್ವಾಹಕ ನಿರ್ದೇಶಕರು**